

ಇಷ್ಟಾಗಿ ನಾನು ಒಮ್ಮೆ ಬರೆದದ್ದನ್ನು ಮತ್ತೆ ಮತ್ತೆ ತಿದ್ದಲ್ಲ. ಕೆಲವರು ಬರೆದದ್ದನ್ನು ಕೆಲವು ದಿನಗಳು ಹಾಗೆಯೇ ಬಿಟ್ಟೆ, ಕೆಲವು ತಿಂಗಳುಗಳ ನಂತರ ಮತ್ತೆ ನೋಡಿದೆ, ಆಗ ತಿದ್ದಲು ಅನುಕೂಲವಾಯಿತು ಅಥವಾ ಬೇರೆ ತರ ಅನ್ನಿಸಿತು ಎನ್ನುವ ಮಾತುಗಳನ್ನು ಹೇಳುತ್ತಾರೆ. ಆದರೆ, ನನ್ನ ಪ್ರಕಾರ ಒಮ್ಮೆ ಬರೆದ ಸಾಲು ಮತ್ತೊಮ್ಮೆ ತಿದ್ದಲು ಹೋದರೆ ಜಾಳಾಗುತ್ತೆ. ನನಗೆ ಇದು ಎಂದಿಗೂ ಸಾಧ್ಯವಾಗಿಲ್ಲ.

◆ **ಈ ಪ್ರಶ್ನೆಯನ್ನು ನಿಮ್ಮ ಹತ್ತಿರ ಸ್ವಲ್ಪ ವಿಸ್ತಾರ ಮಾಡಿ ಕೇಳುವೆ. ನೀವು ಒಂದು ಸಾಹಿತ್ಯಕೃತಿಯನ್ನು ಸೃಷ್ಟಿ ಮಾಡಿದ ನಂತರ ಅದನ್ನ ಮತ್ತೆ ಯಾವಾಗ ಮುಖಾಮುಖಿ ಆಗುತ್ತೀರಿ ಅಥವಾ ಆಗುವುದೇ ಇಲ್ಲವೇ?**

ನಾನು ಮೊದಲೇ ಹೇಳಿದೆ, ಬರೆಯುವ ಸಂದರ್ಭದಲ್ಲಿ ನಾನು ಇದನ್ನೇ ಬರೆಯುತ್ತೇನೆ ಎಂದು ಹೊರಡುವುದಿಲ್ಲ. ಬರವಣಿಗೆ ಮುಗಿಯುವ ಹಂತಕ್ಕೆ ಒಂದೊಮ್ಮೆ ಬರೆದದ್ದೆಲ್ಲದರ ಮೇಲೆ ಕಣ್ಣಾಡಿಸಿದಾಗ ನನ್ನ ತಲೆಯಲ್ಲಿ ಈ ಆಲೋಚನೆಗಳಲ್ಲ ಇದ್ದವು ಎಂಬ ಅಂಶವೇ ಕೆಲವೊಮ್ಮೆ ನನಗೆ ಆಶ್ಚರ್ಯವೆಂಬಂತೆ ಗೋಚರಿಸುತ್ತದೆ.

ಯಾಕೆಂದರೆ, ಬರವಣಿಗೆ ಎನ್ನುವುದು ನನ್ನ ದೈಹಿಕ ಇರವನ್ನು ಮೀರಿ ನಡೆಯುತ್ತಿರುವ ಕ್ರಿಯೆ ಎಂದು ನನಗೆ ಎಷ್ಟೋ ಸಾರಿ ಅನಿಸಿದೆ. ಅದೇ ಕಾರಣಕ್ಕೆ ನಾನು ಬರೆದದ್ದು ನನಗೆ ಲಘು ಅಥವಾ ಜಾಳು ಎನಿಸುವುದಿಲ್ಲ. ಒಂದು ಸಾರಿ ಆ ಕೆಲಸ ಮುಗಿದ ಮೇಲೆ ನಾನು ಮತ್ತೆ ಅದನ್ನು ಮರುಭೇಟಿ ಮಾಡುವುದಿಲ್ಲ. ನನ್ನ ಪ್ರಕಾರ ಅದು ಮುಗಿದು ಹೋದ ಕೆಲಸ. ಅದು ಹೇಗೆ ಮೂಡಿಬಂದಿದೆ ಅದೇ ಸ್ವರೂಪದಲ್ಲಿ ಓದುಗರ ಮುಂದೆ ಕಾಣಿಸಿಕೊಳ್ಳಬೇಕು. ಮುಂದಿನ ವಿಮರ್ಶೆ ಅವರಿಗೆ ಬಿಟ್ಟಿದ್ದು.